**ಸಾಕ್ಷಿಯನ್ನು ದಿಃ *15/10/2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| **ನಿ.ಪಿ.12** | ದಿಃ03-09-2025 ರಂದು ನೀಡಿರುವ ಅಂಗನ್ಯೂನತೆ ಪ್ರಮಾಣಪತ್ರ |
| **ನಿ.ಪಿ.13** | ಎರಡು ಎಕ್ಸರೆಗಳು (ಒಟ್ಟಾಗಿ) |

**ಪಾಟೀ ಸವಾಲು : ಶ್ರೀ ಪಿಸಿಜಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.**

ನಾನು ಗಾಯಾಳುವಿಗೆ ಅಪಘಾತವಾದ ಕೂಡಲೇ ಚಿಕಿತ್ಸೆ ನೀಡಿಲ್ಲ. ಗಾಯಾಳು ನನ್ನ ಹತ್ತಿರ ದಿಃ03-09-2025 ರಂದು ಅಂಗನ್ಯೂನತೆ ಪ್ರಮಾಣಪತ್ರ ಪಡೆಯುವ ಸಲುವಾಗಿ ಮತ್ತು ಮುಂದುವರೆದ ಚಿಕಿತ್ಸೆ ಮತ್ತು ಸೂಚನೆ ಸಲುವಾಗಿ ಬಂದಿದ್ದರು. ಸದರಿ ದಿನಾಂಕದಂದು ನಾನು ಪರೀಕ್ಷಿಸಿ ಅಂಗನ್ಯೂನತೆ ಪ್ರಮಾಣಪತ್ರ ಒದಗಿಸಿದ್ದೇನೆ. ಹೊರರೋಗಿಯ ದಾಖಲೆಯನ್ನು ನಾನು ಗಾಯಾಳುವಿಗೆ ಒದಗಿಸಿದ್ದೇನೆ, ಇಲ್ಲಿ ಹಾಜರುಪಡಿಸಿಲ್ಲ.

ಸದರಿ ಗಾಯಾಳು ನನ್ನ ಹತ್ತಿರ ಬಂದಾಗ ಸರಕಾರಿ ಆಸ್ಪತ್ರೆ ನರಗುಂದ ಇವರು ನೀಡಿರುವ ಗಾಯದ ಪ್ರಮಾಣಪತ್ರ, ಗದಗ ಸರಕಾರಿ ವೈದ್ಯಕೀಯ ಮಹಾವಿದ್ಯಾಲಯ ಇವರು ನೀಡಿರುವ ಪೀಡಬ್ಯಾಕ ದಾಖಲೆ ಮತ್ತು ಗೋಕಾಕ ಗಂಗಾ ಆಸ್ಪತ್ರೆಯವರು ನೀಡಿರುವ ಡಿಸಚಾರ್ಜ ಸಮರಿ ನೋಡಿರುತ್ತೇನೆ. ನಾನು ನೀಡಿರುವಂತ ದಾಖಲಾತಿಗಳೊಂದಿಗೆ ಈ ರೀತಿ ನೋಡಿರುವ ದಾಖಲಾತಿಗಳನ್ನು ಲಗತ್ತಿಸಿಲ್ಲ. ಅಪಘಾತವು ಎಲ್ಲಿ ಮತ್ತು ಹೇಗೆ ಆಗಿದೆಎಂದು ನನಗೆ ಗೊತ್ತಿಲ್ಲ, ರಸ್ತೆ ಅಪಘಾತ ಎಂದು ಮಾತ್ರ ಗೊತ್ತು. ಈ ರೀತಿ ಇರುವ ರಸ್ತೆ ಅಪಘಾತದಲ್ಲಿ ಬಲಗೈ ಮುಂಗೈಯಲ್ಲಿ ಎರಡು ಮೂಳೆಗಳ ಮುರಿತ, ಎಡಗಾಲಿನಲ್ಲಿ ಎರಡು ಮೂಳೆಗಳ ಮುರಿತ ಆಗಿದ್ದವು.

ಗದಗದ ಸರಕಾರಿ ಆಸ್ಪತ್ರೆಯಲ್ಲಿ ಬಲಗೈ ಮುಂಗೈಯಲ್ಲಿ ಎರಡು ಮೂಳೆಗಳ ಮುರಿತಕ್ಕೆ ಮತ್ತು ಎಡಗಾಲಿನಲ್ಲಿನ ಟಿಬಿಯಾ ಮೂಳೆ ಮುರಿತಕ್ಕೆ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಈ ರೀತಿ ಮೂರು ಮೂಳೆ ಮರಿತದ ಶಸ್ತ್ರಚಿಕಿತ್ಸೆಯನ್ನು ದಿಃ16-10-2023 ರಿಂದ 27-10-2023 ರ ಅವಧಿಯಲ್ಲಿ ಮಾಡಿರುತ್ತಾರೆ.

ಸದರಿ ಶಸ್ತ್ರಚಿಕಿತ್ಸೆಯನ್ನು ಅತ್ಯಾಧುನಿಕ ತಂತ್ರಜ್ಞಾನ ಮಾಡಲಾಗಿದೆ ಎಂದರೆ ನಿಜ. ಈ ರೀತಿ ಅತ್ಯಾಧುನಿಕ ತಂತ್ರಜ್ಞಾನದಿಂದ ಮಡಿರುವ ಕಾರಣ ಮೂಳೆ ಮುರಿತಗಳು ಜೋಡಣೆಯಾಗಿವೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮುಂಗೈ ಮೂಳೆ ಮುರಿತಗಳು ಸಾಮಾನ್ಯವಾಗಿ 2-3 ತಿಂಗಳ ಅವಧಿಯಲ್ಲಿ ಮತ್ತು ಕಾಲಿನ ಮುರಿತಗಳು ಸಾಮಾನ್ಯವಾಗಿ 4-5 ತಿಂಗಳ ಅವಧಿಯಲ್ಲಿ ಜೋಡಣೆಯಾಗುತ್ತವೆ ಎಂದು ಉತ್ತರಿಸುತ್ತಾರೆ. ಈ ರೀತಿ ಜೋಡಣೆಯಾದ ನಂತರ ಒಳಗೆ ಅಳವಡಿಸಿರುವ ಉಪಕರಣಗಳನ್ನು ತೆಗೆದು ಹಾಕುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸಾಮಾನ್ಯವಾಗಿ ಉಪಕರಣಗಳನ್ನು ಎರಡು ವರ್ಷಗಳವರೆಗೆ ಇಡಲಾಗುತ್ತದೆ ಎಂದು ಉತ್ತರಿಸುತ್ತಾರೆ.

ಗಂಗಾ ಆಸ್ಪತ್ರೆಯವರು ಸಲ್ಲಿಸಿರುವ ಡಿಸಚಾರ್ಜ ಸಮರಿ ಪ್ರಕಾರ ಗದಗ ಆಸ್ಪತ್ರೆಯಲ್ಲಿ ಕಾಲಿಗೆ ಅಳವಡಿಸಿದ ರಾಡನ್ನು ಸಡಿಲಗೊಂಡಿರುವ ಕಾರಣ ಅದನ್ನು ತೆಗೆದು ಅದರಂತೆ ಇನ್ನೊಂದು ರಾಡನ್ನು ಅಳವಡಿಸಲಾಗಿದೆಎಂದು ಉಲ್ಲೇಖವಿರುತ್ತದೆ. ಸದರಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನಾನು ನೋಡಿರುವ ದಾಖಲಾತಿ ಪ್ರಕಾರ ಮುಂದುವರೆದ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕೆನ್ನುವ ಉಲ್ಲೇಖವಿರುತ್ತದೆ. ನನ್ನ ಹತ್ತಿರ ಬಂದಾಗ ಈ ರೀತಿ ಮುಂದುವರೆದ ಚಿಕಿತ್ಸೆಯನ್ನು ಮುಂದುವರೆಸಿದ ಬಗ್ಗೆ ದಾಖಲಾತಿ ಒದಗಿಸಿಲ್ಲ.

ನಿ.ಪಿ.13 ರಂತೆ ಇರುವ ಎಕ್ಸರೆ ಪ್ರಕಾರ ಮುರಿದ ಮೂಳೆ ಜೋಡಣೆಯಾಗಿದ್ದು, ಆದರೆ ಕೈ ಮತ್ತು ಕಾಲಿನ ಮೂಳೆಗಳು ಡೊಂಕಾಗಿ ಜೋಡಣೆಯಾಗಿದ್ದು ಕಂಡು ಬರುತ್ತದೆ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಜೋಡಣೆಯಾಗಿರುವ ಕಾರಣ ಗಾಯಾಳು ತನ್ನ ದೈನಂದಿನ ಕಾರ್ಯಗಳನ್ನು ಸರಳವಾಗಿ ಮಾಡಬಹುದು ಎಂಬ ಪ್ರಶ್ನೆಗೆ ಸಾಕ್ಷಿದಾರರು ನೋವಿನಿಂದ ಮಾಡಬಹುದು ಎಂದು ಉತ್ತರಿಸುತ್ತಾರೆ. ಅಂಗನ್ಯೂನತೆ ಪ್ರಮಾಣಪತ್ರ ಎರಡು ವರ್ಷಗಳ ನಂತರ ಒದಗಿಸಿರುವ ಕಾರಣ ಗಾಯಾಳು ತನ್ನ ದೈನಂದಿನ ಕೆಲಸಗಳನ್ನು ನೋವಿಲ್ಲದೆ ಮಾಡುತ್ತಿದ್ದರು ಸಹ ನೋವಿನಿಂದ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನ್ಯೂನತೆಗಳು ತಾತ್ಕಾಲಿಕ ನ್ಯೂನತೆಗಳು ಹೊರತು ಶಾಶ್ವತ ನ್ಯೂನತೆಗಳು ಅಲ್ಲ ಎಂದರೆ ಸರಿಯಲ್ಲ. ಈ ರೀತಿ ಹೇಳಿಕೆಯನ್ನು ಗಾಯಾಳುವಿಗೆ ಹೆಚ್ಚಿನ ಪರಿಹಾರ ಹಣ ಸಿಗಲಿ ಎಂದು ಹೇಳುತ್ತಿರುವ ಸುಳ್ಳು ಹೇಳಿಕೆ ಎಂದರೆ ಸರಿಯಲ್ಲ.

ಸದರಿ ಅಂಗನ್ಯೂನತೆ ಪ್ರಮಾಣಪತ್ರವನ್ನು ಸರಕಾರದ ನಿಯಮಾನುಸಾರ ಮಾಡಿರುತ್ತೇನೆ. ಗಾಯದ ಅಂಗವನ್ನು ಬೇರೆ ಒಳ್ಳೆಯ ಅಂಗಕ್ಕೆ ಹೋಲಿಸದೆ ಗಾಯಾಳುವಿಗೆ ಹೆಚ್ಚಿನ ಪರಿಹಾರ ಹಣ ಸಿಗಲಿ ಎಂದು ಯಾವುದೇ ನ್ಯೂನತೆ ಮತ್ತು ತೊಂದರೆ ಇರದೇಯಿದ್ದರೂ ಸಹ ಹೆಚ್ಚಿನ ಅಂಗನ್ಯೂನತೆ ಪ್ರತಿಶತ ತೋರಿಸಿ ಸುಳ್ಳು ಪ್ರಮಾಣಪತ್ರ ಒದಗಿಸಿ ಅದರಂತೆ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಎಲ್ಲ ಸಲಹೆಗಳು ಸರಿಯಲ್ಲ.

ನನ್ನ ಪ್ರಮಾಣಪತ್ರದ 3ನೇ ಖಂಡಿಕೆಯಲ್ಲಿ ತೋರಿಸಿರುವ ಯಾವುದೇ ಗಾಯಗಳು ಗಾಯಾಳುವಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಸಲಹೆ ನೀಡಿರುವಂತೆ ಮುಂದುವರೆದ ಚಿಕಿತ್ಸೆಯನ್ನು ಮುಂದುವರೆಸಿದ ಕುರಿತು ಇರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದ್ದರಿಂದ 4ನೇ ಖಂಡಿಕೆಯಲ್ಲಿ ಲೆಕ್ಕಾಚಾರ ಮಾಡಿರುವ ನ್ಯೂನತೆ ಪ್ರತಿಶತಗಳು ನಿಯಮಾನುಸಾರವಿರದೇ ಹೆಚ್ಚಿನ ಪರಿಹಾರ ಹಣ ಸಿಗಲು ಮಾಡಿರುವ ತಪ್ಪು ಲೆಕ್ಕಾಚಾರ ಎಂದರೆ ಸರಿಯಲ್ಲ. ಚಿಕಿತ್ಸೆ ನೀಡಿರುವ ವೈದ್ಯರಎ ಅಂಗನ್ಯೂನತೆ ಇರುವುದಿಲ್ಲ ಎಂದು ಹೇಳಿರುವ ಕಾರಣ ಗಾಯಾಳು ಹೆಚ್ಚಿನ ಪರಿಹಾರ ಹಣ ಸಿಗಲಿ ಎಂದು ನನ್ನ ಬಳಿ ಬಂದು ಕೇಳಿಕೊಂಡಾಗ ಈ ರೀತಿ ಹೆಚ್ಚಾಗಿ 47 ಪ್ರತಿಶತದ ಸುಳ್ಳು ಅಂಗನ್ಯೂನತೆ ಪತ್ರ ಒದಗಿಸಿ ಅದರಂತೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಿರ್ದಿಷ್ಟ ಭಾಗಕ್ಕೆ ನೀಡಿದ ಅಂಗನ್ಯೂನತೆ ಸಂಪೂರ್ಣ ದೇಹಕ್ಕೆ ಅದರ 1/3 ಅಂಶ ಆಗುತ್ತದೆ ಎಂದರೆ ಆ ರೀತಿ ಲೆಕ್ಕಾಚಾರ ಇರುವುದಿಲ್ಲ, ಆದರೆ ಸಂಪೂರ್ಣ ದೇಹಕೆ ಹೋಲಿಸಿದರೆ ಕಡಿಮೆ ಪ್ರಮಾಣ ಆಗಬಹುದು ಎಂದು ಹೇಳುತ್ತಾರೆ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.